# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ-586108

KARANATAKA STATE AKKAMAHADEVI WOMEN UNIVERSITY,VIJAYAPURA-586108

ಕುಲಸಚಿವರ ಕಛೇರಿ | Office of the Registrar

ಜ್ಞಾನಶಕ್ತಿ ಆವರಣ ತೊರವಿ | Jnanashakti Campus,Torvi

Web :www.kswu.ac.in | Email: registrar@kswu.ac.in


ಸಂಖ್ಯೆ:ಕರಾಅಮವಿವಿ/ಯುರೆಫ್/ಸುತ್ತೋಲೆ/2025-26/ 3291 ದಿನಾಂಕ: 21-02-2026.

## ಸುತ್ತೋಲೆ

ವಿಷಯ: ಯುವ ರೆಡ್ ಕ್ರಾಸ್ ಘಟಕಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನೋಂದಣಿ ಶುಲ್ಕ ಮತ್ತು ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿ ಮಾಡುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 64 ವಿವಿಧ 2011, ದಿನಾಂಕ: 22.12.2011
2. ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಸುತ್ತೋಲೆ ದಿನಾಂಕ: 11.06.2024
3. ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ದಿನಾಂಕ: 17.06.2016
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:05-02-2026

*******

ಮೇಲ್ಕಂಡ ಉಲ್ಲೇಖ (1) ಮತ್ತು (3) ರ ಸರ್ಕಾರದ ಆದೇಶಗಳಲ್ಲಿ ಹಾಗೂ ಕಛೇರಿಯ ಸುತ್ತೋಲೆಯಲ್ಲಿ XV ನೇ ಕೇಂದ್ರ ಅಧಿನಿಯಮ -1920ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಬಹುಮುಖ್ಯ ಅಂಗವಾದ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಹಾಗೂ ಈ ಮೂಲಕ ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ನಿಟ್ಟಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ.

ಅದರಂತೆ ಒಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೊಳ್ಳುವಂತೆಯು ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕ ದಡಿಯಲ್ಲಿ ವಾರ್ಷಿಕವಾಗಿ ರೂ. 50/- ಗಳನ್ನು ಸಂಗ್ರಹಿಸುವಂತೆಯು ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಆನ್‌ಲೈನ್ ಮೂಲಕ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದೆ.

ಅದ್ದರಿಂದ ಇಲ್ಲಿಯವರೆವಿಗೂ ರೆಡ್ ಕ್ರಾಸ್ ಸಂಸ್ಥೆಗೆ ನೋಂದಣಿಯಾಗದೆ ಇರುವ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಅದೀನದ ಕಾಲೇಜುಗಳಲ್ಲಿ ಕಡ್ಡಾಯವಾಗಿ ಯೂತ್ ರೆಡ್ ಕ್ರಾಸ್ ಘಟಕ ವನ್ನು ಸ್ಥಾಪಿಸಿ ಈ ಕೂಡಲೇ ಶುಲ್ಕ ರೂ.1500/- ಗಳನ್ನು ಮತ್ತು 2025-26 ನೇ ಶೈಕ್ಷಣಿಕ ವರ್ಷದ ಪ್ರತಿ ವಿದ್ಯಾರ್ಥಿಯಿಂದ 30% (ರೂ.15/-) ಗಳನ್ನು ಭಾರತೀಯ ರೆಡ್ ಕ್ರಾಸ್, ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಕೂಡಲೇ ಪಾವತಿಸುವಂತೆ ಸೂಚಿಸಲಾಗಿದೆ.

ಮುಂದುವರೆದು, ಸದರಿ ಶುಲ್ಕವನ್ನು ಈ ಕೆಳಕಂಡಂತೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ಮೂಲಕ ಪಾವತಿಸತಕ್ಕದ್ದು, ವಿವರ ಈ ಕೆಳಗಿನಂತಿವೆ.

- ಮೊದಲು ಗೂಗಲ್‌ನಲ್ಲಿ - https://redcrosskarnataka.org/ ಎಂದು ನಮೂದಿಸಬೇಕು.
- ನಂತರ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಯ ಅಧಿಕೃತ ವೆಬ್‌ಸೈಟ್ ತೆರೆದುಕೊಳ್ಳುತ್ತದೆ
- ಬಲ ಮೇಲ್ಭಾಗದಲ್ಲಿ ಇರುವ youth Red Cross Registration ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು.
- ನಂತರ ಅರ್ಜಿ ನಮೂನೆ ತೆರೆದುಕೊಳ್ಳುತ್ತದೆ, ಇಲ್ಲಿ ತಮ್ಮ ಕಾಲೇಜಿನ AISHE( All India Survey of Higher Education) OR UUCMS (Unified University College Management system) ಸಂಖ್ಯೆ/ಕೋಡ್ ಅನ್ನು ನಮೂದಿಸಬೇಕು.
- ಸಂಖ್ಯೆ ನಮೂದಿಸದ ನಂತರ ಕೀ ಬೋರ್ಡ್‌ನಲ್ಲಿ Enter ಒತ್ತಬೇಕು.
- ನಿಮ್ಮ ಕಾಲೇಜಿನ ಹೆಸರು ಮತ್ತು ಇನ್ನಿತರ ಮಾಹಿತಿಗಳು ಸ್ವಯಂ ಭರ್ತಿಯಾಗುತ್ತದೆ (Auto populate)
- ನಂತರ ಅರ್ಜಿ ನಮೂನೆಯಲ್ಲಿ ಕೇಳಿರುವ ಎಲ್ಲಾ ಮಾಹಿತಿಗಳನ್ನು ಖಡ್ಡಾಯವಾಗಿ ಭರ್ತಿ ಮಾಡಬೇಕು.



Scanned with OKEN Scanner

- ಈಗಾಗಲೇ ತಮ್ಮ ಕಾಲೇಜು ನೋಂದಣಿಯಾಗಿದ್ದರೆ Already Registered ಎಂಬ ಆಯ್ಕೆಯನ್ನು ಆಯ್ಕೆಮಾಡಬೇಕು
- ನೋಂದಣಿಯಾಗಿರದಿದ್ದರೆ Not Registered ಎಂಬ ಆಯ್ಕೆಯನ್ನು ಆಯ್ಕೆ ಮಾಡಬೇಕು. ಆಯ್ಕೆ ಮಾಡಿದ ನಂತರ ಸ್ವಯಂ ನೋಂದಣಿ ಶುಲ್ಕ ರೂ.1500/- ಸೇರಿಕೊಳ್ಳುತ್ತದೆ.
- ಮುಂದೆ ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕ ಪಾವತಿ ನಮೂನೆಯಲ್ಲಿ ಒಟ್ಟು ವಿದ್ಯಾಥಿಗಳ ಸಂಖ್ಯೆಯನ್ನು ನಮೂದು ಮಾಡಬೇಕು (ಮೊದಲನೆ ಸೆಮಿಸ್ಟರನಿಂದ ಕೊನೆಯ ಸೆಮಿಸ್ಟರನ ಎಲ್ಲಾ ವಿದ್ಯಾರ್ಥಿಗಳು) ಪ್ರತಿ ವಿದ್ಯಾರ್ಥಿಗೆ ರೂ.15/- ರಂತೆ ಒಟ್ಟು ಶುಲ್ಕ ಲೆಕ್ಕಿಸಲಾಗುತ್ತದೆ.
- ಹಿಂದಿನ ವರ್ಷಗಳ ವಿದ್ಯಾರ್ಥಿಗಳ ಸದಸ್ಯತ್ವ ಶುಲ್ಕ ಪಾವತಿಸಲು Add year ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು. ನಂತರ ಸಂಬಂದಿಸಿದ ವರ್ಷವನ್ನು ಆಯ್ಕೆ ಮಾಡಿ ಆವರ್ಷದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಬೇಕು (ಉದಾಹರಣೆ- 2017-18, 2018-2019, 2019-2020, 2020-2021, 2021-22, 2022-2023)
- ಹಿಂದಿನ ವರ್ಷ ಯುವ ರೆಡ್ ಕ್ರಾಸ್ ಘಟಕದಡಿ ನಡೆದ ಕಾರ್ಯಕ್ರಮಗಳ ವರದಿಯನ್ನು ಅಪ್ಲೋಡ್ ಮಾಡಲು ಆಯ್ಕೆ ನೀಡಲಾಗಿದೆ. ವರದಿ ಇದ್ದಲ್ಲಿ ಅಪ್ಲೋಡ್ ಮಾಡಬಹುದು
- ನಂತರ Pay Now ಎಂಬ ಆಯ್ಕೆಯ ಮೇಲೆ ಕ್ಲಿಕ್ ಮಾಡಿದಾಗ ಪಾವತಿ ಸ್ಕ್ಯಾನರ್ ತೆರೆದು ಕೊಳ್ಳುತ್ತದೆ. ಇಲ್ಲಿ ಯಾವುದೇ UPI ಮೂಲಕ ಪಾವತಿ ಮಾಡಬಹುದು
- ಪಾವತಿ ಯಶಸ್ವಿಯಾದ ನಂತರ, ತಾವು ನೀಡಿರುವ ಇಮೇಲ್ ವಿಳಾಸಕ್ಕೆ ಕೊಡಲೇ ನೋಂದಣಿ ಪ್ರಮಾಣ ಪತ್ರ ಮತ್ತು ರಶೀದಿ ಸ್ವಯಂ ಕಲುಹಿಸಲಾಗುತ್ತದೆ.
- ಒಂದು ವೇಳೆ UPI ಮೂಲಕ ಪಾವತಿ ಮಾಡಲು ಸಾದ್ಯವಾಗದಿದ್ದರೆ, Pay Now ಮೇಲೆ ಕ್ಲಿಕ್ ಮಾಡಿದ ಬಳಿಕ ಬಲಭಾಗದಲ್ಲಿ ನೀಡಿರುವ ಭಾರತೀಯ ರೆಡ್ ಕ್ರಾಸ್ ಸಂಸ್ಥೆ-ಯುವ ರೆಡ್ ಕ್ರಾಸ್ ಬ್ಯಾಂಕ್ ಖಾತೆ ಸಂಖ್ಯೆ ನೀಡಲಾಗಿದೆ. ಈ ಬ್ಯಾಕ್ ಖಾತೆ ಸಂಖ್ಯೆಗೆ NFET/IMPS/CASH ಮೂಲಕ ಪಾವತಿಸಿ. ಬ್ಯಾಂಕ್ ನೀಡುವ ಪಾವತಿ ಚಲನ್ ಅನ್ನು ಸಾಫ್ಟವೇರ್ ಮೂಲಕ ಅಪ್ಲೋಡ್ ಮಾಡಬೇಕು. ನಂತರ ತಾವು ನೀಡಿರುವ ಇಮೇಲ್ ವಿಳಾಸಕ್ಕೆ ತಕ್ಷಣವೇ ನೋಂದಣಿ ಪ್ರಮಾಣ ಪತ್ರ ಮತ್ತು ರಶೀದಿ ಕಳುಹಿಸಲಾಗುತ್ತದೆ

| | |
|---|---|
| Bank Name | Canara Bank |
| Account Holder Name | Indian Red Cross Society- Youth Red Cross |
| Account Number | 2827101016832 |
| IFSC CODE | CNRB0002827 |
| Branch Name | KSFC Complex , Thimmiah Road Bangalore |

ಈ ಕುರಿತಂತೆ ಯಾವುದೇ ಗೊಂದಲಗಳಿದ್ದಲ್ಲಿ ಈ ಕೆಳಗೆ ನೀಡಿರುವ ದೂರವಾಣಿ ಸಂಖ್ಯೆಗೆ ಸಂಪರ್ಕಿಸುವುದು

| SL No | Name of the | Designation | Mobile Number |
|---|---|---|---|
| 1 | IRCS KSB | Landline | 080-22264205 |
| 2 | Sri Anand D.G | YRC Coordinator | 8147182172 |
| 3 | Ms. Anju J | SDA | 7337852629 |
| 4 | Ms. K. Vaishnavi | Data Entry Operator | 636248327 |

ಮುಂದುವರೆದು ಯುವ ರೆಡ್ ಕ್ರಾಸ್ ಘಟಕಗಳಿಗೆ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಮೊತ್ತದ 70% (ರೂ.35/-) ನ್ನು ಕಾಲೇಜಿನಲ್ಲಿ ನಡೆಸುವ ರೆಡ್ ಕ್ರಾಸ್ ಘಟಕಗಳ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳತಕ್ಕದ್ದು. ಸುತ್ತೋಲೆ ತಲುಪಿಯು ನೋಂದಣಿಯಾಗದೆ ಇದ್ದರೆ ಮುಂದಿನ ಆಗು ಹೋಗುಗಳಿಗೆ ತಾವೇ ನೇರಾ ಹೊಣೆಗಾರರಾಗಿರುತ್ತೀರಿ ಹಾಗೂ ಅಂತಹ ಕಾಲೇಜುಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು.

ಕುಲಸಚಿವರು
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾಲಯ

ಇವರಿಗೆ:

1. ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳ ಪ್ರಾಶುಂಪಾಲರುಗಳು ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು

1. ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ. 26 ರೆಡ್ ಕ್ರಾಸ್ ಭವನ, 1ನೇ ಮಹಡಿ ರೆಸ್ ಕೋರ್ಸ್ ರಸ್ತೆ, ಬೆಂಗಳೂರು-560001
2. ಕಛೇರಿ ಪ್ರತಿ.



Scanned with OKEN Scanner